Bruhat Bengaluru Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ಉಪವಿಭಾಗ, 7ನೇ ಮಹಡಿ, ಪಿ.ಯು.ಕಟ್ಟಡ, ಎಂ.ಜಿ.ರಸ್ತೆ, ಮೇಯೊಹಾಲ್, ಬಿ.ಬಿ.ಎಂ.ಪಿ. ಬೆಂಗಳೂರು-560001

ಸಂಖ್ಯೆ : ಸ.ಕಾ.ಅ/ಶಾಂ.ಉವಿ/ಪಿಆರ್/ /2022-23 ದಿನಾಂಕ : 15|10|22

## -: ಸಭೆಯ ನಡಾವಳಿಗಳು :-

**ವಾರ್ಡ್-116 ನೀಲಸಂದ್ರ ಸಮಿತಿ ಸಭೆ ದಿನಾಂಕ:15-10-2022 ರ ನಡವಳಿಗಳ ಬಗ್ಗೆ ಕೈಗೊಂಡಿರುವ ಕ್ರಮಗಳ ವಿವರ.**

ದಿನಾಂಕ:-15-10-2022 ರಂದು ಮಧ್ಯಾಹ್ನಾ 12:30 ಗಂಟೆಗೆ ವಾರ್ಡ್-116 ನೀಲಸಂದ್ರ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿ ಸಭೆಯನ್ನು ನಡೆಸಲಾಗಿತ್ತು. ಅದರಂತೆ ಸದರಿ ಸಭೆಯ ಅನುಸರಣಾ ವರಧಿಯನ್ನು ಈ ಕೆಳಕಂಡತೆ ಮಂಡಿಸಲಾಗಿದೆ.

**ಅನುಸರಣಾ ವರದಿ (15-10-2022 ರಂದು ನಡೆದ ಸಭೆಯ ನಡವಳಿಗಳು):-**

| ಕ್ರ.ಸಂ | ಮಾಹಿತಿ | ಕ್ರಮವಹಿಸಬೇಕಾದ ಅಧಿಕಾರಿಗಳು |
|---|---|---|
| | **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (BBMP)** | |
| 1 | **ಕಾಮಗಾರಿ ಇಲಾಖೆ (Engineering Department)** | |
| | ✚ ಶ್ರೀ.ಮಂಜು.ವಿ.ಆರ್.ಸಾರ್ವಜನಿಕ:-ಎಲ್.ಆರ್ ನಗರದ 25ನೇ ಅಡ್ಡರಸ್ತೆಯ ಚರಂಡಿಗಳಲ್ಲಿನ ಹೂಳನ್ನು ತೆಗೆಸಲು ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿದರು.<br>✚ ಸಾರ್ವಜನಿಕರು (ನೀಲಸಂದ್ರ) ರವರು:-ಎಲ್.ಆರ್ ನಗರದ 5ನೇ ಅಡ್ಡರಸ್ತೆ, ಅಂಬೇಡ್ಕರ್ ನಗರ ಈ ರಸ್ತೆಗಳಲ್ಲಿ ಬರುವ ಗುಂಡಿಯನ್ನು ಮುಚ್ಚುವಂತೆ ಕೋರಿದರು. | ಕಾಮಗಾರಿ ಪ್ರಗತಿಯಲ್ಲಿದೆ. |
| 2 | **ವಿದ್ಯುತ್ ಇಲಾಖೆ (ELECTRICAL DEPARTMENT)** | |
| | ✚ ಸಾರ್ವಜನಿಕರು (ನೀಲಸಂದ್ರ) ರವರು:-ಎಲ್.ಆರ್ ನಗರ ಅಡರಸ್ತೆಗಳಲ್ಲಿ ಬೆಸ್ಕಾಂ ಮೀಟರ್‌ಗಳನ್ನು ತೆರವು ಗೊಳಿಸಲು ಯಾವುದೇ ಮಾಹಿತಿ ತಿಳಿಸದೇ ಮೀಟರ್‌ಗಳನ್ನು ತೆರವುಗೊಳಿಸಿದ್ದು ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕೋರಿದರು.<br>✚ ಸಾರ್ವಜನಿಕರು (ನೀಲಸಂದ್ರ) ರವರು:-ಎಲ್ ಆರ್ ನಗರ 15ನೇ ಅಡ್ಡರಸ್ತೆ ಬಳಿ ಬೀದಿ ದೀಪದ ಕಂಬವನ್ನು ಅಳವಡಿಸುವಂತೆ ಕೋರಿರುತ್ತಾರೆ. | ಸಂಬಂಧಪಟ್ಟ ಅಧಿಕಾರಿಗಳಿಗೆ ಕೂಡಲೇ ಕ್ರಮ ವಹಿಸಲು ಸೂಚಿಸಲಾಗಿದೆ. |
| 3 | **ಅರಣ್ಯ ಇಲಾಖೆ** | |
| | ✚ ಶ್ರೀ., ಸಾರ್ವಜನಿಕರು (ನೀಲಸಂದ್ರ) ರವರು:-ಸದರಿ ವಾರ್ಡ್‌ನಲ್ಲಿ ಬರುವ ಐಪಿಪಿ ಆಸ್ಪತ್ರೆ ಬಳಿಯ ರಸ್ತೆಯ ಅಡಚಣೆಯ ಮರಗಳ ಕೊಂಬೆಗಳನ್ನು ತೆರವುಗೊಳಿಸಲು ಕೋರಿದರು. | ತೆರವುಗೊಳಿಸಲಾಗಿದೆ. |

Scanned with OKEN Scanner

| | | |
|---|---|---|
| 4 | **ಘನತ್ಯಾಜ್ಯ ನಿರ್ವಹಣೆ ಶಾಂತಿನಗರ (SWM)** | |
| | ➜ ಸಾರ್ವಜನಿಕರು (ನೀಲಸಂದ್ರ) ರವರು:-ವಾರ್ಡ್ ವ್ಯಾಪ್ತಿಯ ಬೃಹತ್ ಮಳೆ ನೀರು ಗಾಲುವೆ ಬಳಿ ಆರ್.ಎಫ್.ಐ.ಡಿ ಮತ್ತು ಜಿ.ಪಿ.ಎಸ್ ಅಳವಡಿಸುವ ಕಾಮಗಾರಿಯನ್ನು ಕೈಗೊಂಡಿದ್ದು, ಸದರಿ ಕಾಮಗಾರಿಯನ್ನು ನಿಲ್ಲಿಸಿರುವುದರಿಂದ ಈ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸಲು ಕೋರಿದರು.<br>➜ ಸಾರ್ವಜನಿಕರು (ನೀಲಸಂದ್ರ) ರವರು:- ಆನೇಪಾಳ್ಯ ಮತ್ತು ಅಂಬೇಡ್ಕರ್ ನಗರ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೌರ ಕಾರ್ಮಿಕರಿಗೆ Suvidha Cabin ಅನ್ನು ಒದಗಿಸಿಕೊಡುವಂತೆ ಕೋರಿದರು. | ಸಂಬಂಧಪಟ್ಟ ಅಧಿಕಾರಿಗಳಿಗೆ ಕೂಡಲೇ ಕ್ರಮ ವಹಿಸಲು ಸೂಚಿಸಲಾಗಿದೆ. |
| 5 | **ಆರೋಗ್ಯ ಇಲಾಖೆ (MOH)** | |
| | ➜ ಸಾರ್ವಜನಿಕರು (ನೀಲಸಂದ್ರ) ರವರು:- ವಾರ್ಡ್ ವ್ಯಾಪ್ತಿಯಲ್ಲಿ ಐಪಿಪಿ ಆಸ್ಪತ್ರೆಗೆ ವಿತರಣೆ ಯಾಗಿರುವ ವ್ಯಾಪಾರ ಪರವಾನಗಿ ಪಟ್ಟಿಯನ್ನು ಸಾರ್ವಜನಿಕರಿಗೆ ಕಾಣುವಂತೆ ಗೋಡೆಗೆ ಅಂಟಿಸಲು ಕೋರಿದರು. | ಸಂಬಂಧಪಟ್ಟ ಅಧಿಕಾರಿಗಳಿಗೆ ಕೂಡಲೇ ಕ್ರಮ ವಹಿಸಲು ಸೂಚಿಸಲಾಗಿದೆ. |
| 6 | **ಬೃಹತ್ ನೀರುಗಾಲುವೆ (SWD DEPARTMENT)** | |
| | ಸಾರ್ವಜನಿಕರು (ನೀಲಸಂದ್ರ) ರವರು:- ಎಲ್.ಆರ್ ನಗರ ಪಂಪ್‌ಹೌಸ್ ಬಳಿ ಒಳಚರಂಡಿಯಲ್ಲಿ ಹೂಳನ್ನು ತೆರವುಗೊಳಿಸಲ ಕೋರಿದರು. | ಸಂಬಂಧಪಟ್ಟ ಅಧಿಕಾರಿಗಳಿಗೆ ಕೂಡಲೇ ಕ್ರಮ ವಹಿಸಲು ಸೂಚಿಸಲಾಗಿದೆ. |

–ಸಹಿ–

ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ –116 ನೀಲಸಂದ್ರ

–ಸಹಿ–

ಅಧ್ಯಕ್ಷರು ಮತ್ತು
ನೋಡಲ್ ಅಧಿಕಾರಿ
ವಾರ್ಡ್ –116 ನೀಲಸಂದ್ರ

Scanned with OKEN Scanner